ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ7[4]ಪ್ರಾಶಿಅ:ಅನು:ಇತರೆ:7.ಎ:2011-12 ದಿನಾಂಕ:17ನೇ ಆಗಸ್ಟ್ 2011

## : ಸು ತ್ತೋ ಲೆ :

**ವಿಷಯ**: ವಿಶೇಷ ಸಂದರ್ಭದಡಿಯಲ್ಲಿ ಎಸ್.ಸಿ/ಎಸ್.ಟಿ ಆಡಳಿತ ಮಂಡಳಿಗಳು ನಡೆಸುತ್ತಿರುವ ಶಾಲೆಗಳಿಗೆ 1992-93 ರಿಂದ 2003ನೇ ಸಾಲಿನವರೆಗೆ ಸಹಾಯಾನುದಾನವನ್ನು ನೀಡಲು ಆಸ್ಪದ ಕಲ್ಪಿಸುವ ಬಗ್ಗೆ.

**ಉಲ್ಲೇಖ**: ಸರ್ಕಾರದ ಪತ್ರ ಸಂಖ್ಯೆ:ಇಡಿ:556:ಪಿಎಂಸಿ:2010, ದಿನಾಂಕ:17.08.2011.

~~~~~

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಎಸ್.ಸಿ/ಎಸ್.ಟಿ ಆಡಳಿತ ಮಂಡಳಿಯವರಿಂದ ನಡೆಸುತ್ತಿರುವ ಶಾಲೆಗಳಿಗೆ 1992-93ನೇ ಸಾಲಿನಿಂದ 2003ನೇ ಸಾಲಿನವರೆಗೆ ಸಹಾಯಾನುದಾನವನ್ನು ನೀಡಲು ಆಸ್ಪದ ಕಲ್ಪಿಸುವ ಬಗ್ಗೆ ಪರಿಶೀಲಿಸಿ, ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ತಿಳಿಸಿರುತ್ತಾರೆ.

ಈ ವಿಷಯದ ಬಗ್ಗೆ ಕರ್ನಾಟಕ ವಿಧಾನಸಭೆ ಅರ್ಜಿಗಳ ಸಮಿತಿಯಲ್ಲಿ ಅರ್ಜಿ ಸಂಖ್ಯೆ:120[ಅ] 2011ರಲ್ಲಿ ಪ್ರಕರಣವಿರುತ್ತದೆ. ಆದುದರಿಂದ ಈ ಬಗ್ಗೆ ತಮ್ಮ ವೈಯಕ್ತಿಕ ಗಮನಹರಿಸಿ, ತಕ್ಷಣ ತಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ಅನುಬಂದ-01ರಲ್ಲಿ ಕೋರಿರುವ ಎಸ್.ಸಿ/ಎಸ್.ಟಿ ಆಡಳಿತ ಮಂಡಳಿಗಳು ನಡೆಸುತ್ತಿರುವ 1992-93 ರಿಂದ 2003ನೇ ಸಾಲಿನವರೆಗಿನ ಶಾಲೆಗಳ ಮಾಹಿತಿಯನ್ನು ದಿನಾಂಕ:19.08.2011ರೊಳಗೆ ಫ್ಯಾಕ್ಸ್ ಮೂಲಕ ಮತ್ತು ಶ್ರೀ ಎಸ್.ಆರ್.ಸವರಿನಾಧನ್, ಹಿರಿಯ ಸಹಾಯಕ ನಿರ್ದೇಶಕರು [ಪ್ರಾಥಮಿಕ ಅನುದಾನ ಶಾಖೆ] ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಈವಿಳಾಸಕ್ಕ ಅಂಚೆ ಮೂಲಕ ಹಾಗೂ ಇಮೇಲ್ ಮೂಲಕ **[ಇಮೇಲ್ ವಿಳಾಸ:srsnadhan@gmail.com]** ವರದಿಯನ್ನು ಕೂಡಲೇ ಸಲ್ಲಿಸಲು ತಿಳಿಸಿದೆ. ಸದರಿ ವಿಷಯವನ್ನು ಅತ್ಯಂತ ತುರ್ತು ಎಂದು ಭಾವಿಸುವುದು.

ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]

**ಇವರಿಗೆ:**

*01.* ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು [ಆಡಳಿತ], ಸಾ.ಶಿ.ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.

*02.* ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.

*03.* ಕಛೇರಿ ಪ್ರತಿ.

ಪೂರ್ಣಿಮ. \\3-server\typing3\D\GIA_Pry\802-2011.doc
~~~~~

# ಅನುಬಂಧ-01

**ಇಲಾಖೆಯಿಂದ ಅನುಮತಿ ಪಡೆದು ಎಸ್.ಸಿ/ಎಸ್.ಟಿ ಆಡಳಿತ ಮಂಡಳಿಗಳ ವತಿಯಿಂದ ನಡೆಯುತ್ತಿರುವ ಪ್ರಾಥಮಿಕ ಶಾಲೆಗಳ ಮಾಹಿತಿ.**
**[ದಿನಾಂಕ:01.06.1999 ರಿಂದ ದಿನಾಂಕ:31.05.2003ರವರೆಗೆ]**

| ಕ್ರಮ ಸಂಖ್ಯೆ | ಶಾಲೆಯ ಹೆಸರು [ಪೂರ್ಣ ವಿಳಾಸ] | ಪ್ರಾರಂಭಿಸಿದ ವರ್ಷ | ಜಿಲ್ಲೆಯ ಹೆಸರು | ತಾಲ್ಲೂಕು | ಎಸ್.ಸಿ/ಎಸ್.ಟಿ ಆಡಳಿತ ಮಂಡಳಿಯ ಹೆಸರು | ಈಗಾಗಲೇ ಅನುದಾನಕ್ಕೆ ಒಳಪಡಿಸಿದ್ದಲ್ಲಿ, ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ |
|---|---|---|---|---|---|---|
| 01 | 02 | 03 | 04 | 05 | 06 | 07 |
| | | | | | | |

ಸಹಿ:-
ಉಪನಿರ್ದೇಶಕರು [ಆಡಳಿತ]
ಸಾರ್ವಜನಿಕ ಶಿಕ್ಷಣ ಇಲಾಖೆ.
____________ಜಿಲ್ಲೆ.

ಪೂರ್ಣಿಮ. \\3-server\typing3\D\GIA_Pry\802-2011.doc